ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
**UNIVERSITY OF AGRICULTURAL SCIENCES**
**Directorate of Research, GKVK, Bangalore – 560 065**

ಸಂಖ್ಯೆ: ಸಂನಿ/ತಾ.ಅ(ಕ್ಷೇತ್ರ)/ಉತ್ತಮ ಕ್ಷೇ.ಅ. ಪ್ರಶಸ್ತಿ–2023–24/2024–25 ದಿನಾಂಕ:10–07–2024

## ಸುತ್ತೋಲೆ

**ವಿಷಯ:** 2023–24ರ ಉತ್ತಮ ಕ್ಷೇತ್ರಾಧೀಕ್ಷಕ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

**ಉಲ್ಲೇಖ:** 1. ಸಂಖ್ಯೆ: ಸಂ.ಸ/ಸಕುಸ/ಅಧೀ/ಸಂ ದಿ ಪ್ರ –2023–24/2024–25 ದಿನಾಂಕ: 28.05.2024
2. ಕುಲಪತಿಗಳ ಅನುಮೋದನೆ ದಿನಾಂಕ: 08.07.2024

–*–*–*

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ 2024ರ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ನೀಡುವ 2023–24ರ ಉತ್ತಮ ಕ್ಷೇತ್ರಾಧೀಕ್ಷಕ ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಈ ಮೂಲಕ ಆಹ್ವಾನಿಸಲಾಗಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಡಿಯಲ್ಲಿರುವ ಕೃಷಿ ಸಂಶೋಧನಾ ಕೇಂದ್ರಗಳ ಅರ್ಹ ಹಿರಿಯ ಕ್ಷೇತ್ರಾಧೀಕ್ಷಕರು / ಕ್ಷೇತ್ರಾಧೀಕ್ಷಕರುಗಳು ಪ್ರಶಸ್ತಿಗೆ ಅರ್ಜಿಗಳನ್ನು ಸಲ್ಲಿಸಲು ಅರ್ಹರಾಗಿದ್ದು, ಸದರಿ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಇಚ್ಛಿಸುವವರು ಸಂಬಂಧಪಟ್ಟ ಸೂಕ್ತ ದಾಖಲಾತಿಗಳು ಹಾಗೂ ಭರ್ತಿಮಾಡಿದ ನಿಗದಿತ ಅರ್ಜಿ ನಮೂನೆಯ ಐದು ಪ್ರತಿಗಳೊಂದಿಗೆ ಹಾಗೂ ರೂ. 500/– ಮೌಲ್ಯದ ಬೇಡಿಕೆ ಹುಂಡಿ (Demand Draft drawn in favour of **COMPTROLLER, UAS, GKVK, BANGALORE)** ಯೊಂದಿಗೆ ಸಮುಚಿತ ಮಾರ್ಗದ ಮೂಲಕ ಸಂಶೋಧನಾ ನಿರ್ದೇಶಕರು, ಕೃವಿವಿ, ಜಿಕೆವಿಕೆ, ಬೆಂಗಳೂರು ಇವರಿಗೆ **ದಿನಾಂಕ: 05.08.2024**ರೊಳಗೆ ಸಲ್ಲಿಸತಕ್ಕದ್ದು.

ನಿಗದಿತ ಅರ್ಜಿ ನಮೂನೆಯನ್ನು ಕೃಷಿ ವಿಶ್ವವಿದ್ಯಾನಿಲಯದ ಅಂತರ್ಜಾಲ ತಾಣದಲ್ಲಿ ಪ್ರಕಟಿಸಿದ್ದು ಅರ್ಹ ಅಭ್ಯರ್ಥಿಗಳು ನಕಲಿಸಬಹುದಾಗಿದೆ www.uasbangalore.edu.in.

**ಅರ್ಹ ಮಾನದಂಡಗಳು:**

1. ಅರ್ಜಿದಾರರು ಹಿರಿಯ ಕ್ಷೇತ್ರಾಧೀಕ್ಷಕರು / ಕ್ಷೇತ್ರಾಧೀಕ್ಷಕರ ಹುದ್ದೆಯಲ್ಲಿ ನಿರಂತರವಾಗಿ ಮೂರು ವರ್ಷಗಳ ವರೆಗೆ ಒಂದೇ ಕೇಂದ್ರದಲ್ಲಿ ಸೇವೆ ಸಲ್ಲಿಸಿರಬೇಕು.
2. ಈ ಪ್ರಶಸ್ತಿಗೆ ಪರಿಗಣಿಸಲು ಅಭ್ಯರ್ಥಿಯು ತಮ್ಮ ಕೃಷಿ ಸಂಶೋಧನಾ ಕೇಂದ್ರದ ಕ್ಷೇತ್ರ ಪ್ರದೇಶ ಅಭಿವೃದ್ಧಿಗಾಗಿ ಶ್ಲಾಘನೀಯ ಕಾರ್ಯಗಳನ್ನು ನಿರ್ವಹಿಸಿರಬೇಕು. ಬೆಳೆ ಯೋಜನೆಗಳನ್ನು ಪರಿಣಾತ್ಮಕವಾಗಿ ಅನುಷ್ಠಾನಗೊಳಿಸಿ, ಆವರ್ತಕ ನಿಧಿಯನ್ನು ಅಥವಾ ವಿಶ್ವವಿದ್ಯಾನಿಲಯದ ಆಯವ್ಯಯವನ್ನು ಬಳಸಿಕೊಂಡು ನಾವೀನ್ಯಯುತ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಕ್ಷೇತ್ರ ಪ್ರದೇಶದ ಆದಾಯವನ್ನು ಉತ್ತಮಗೊಳಿಸುವಲ್ಲಿ ಯಶಸ್ವಿಯಾಗಿರಬೇಕು.
3. ಪ್ರಶಸ್ತಿಯನ್ನು ಒಂದೇ ವ್ಯಕ್ತಿಗೆ ಒಂದಕ್ಕಿಂತ ಹೆಚ್ಚು ಬಾರಿ ಪ್ರದಾನ ಮಾಡಲಾಗುವುದಿಲ್ಲ.

10/7/24
ಸಂಶೋಧನಾ ನಿರ್ದೇಶಕರು

ಸಂಶೋಧನಾ ನಿರ್ದೇಶಕರು
ಕೃಷಿ ವಿಶ್ವವಿದ್ಯಾನಿಲಯ
ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಬೆಂಗಳೂರು–560065

ಗೆ

1. ಸಹ ಸಂಶೋಧನಾ ನಿರ್ದೇಶಕರು, ವಕೃಸಂಕೇ, ಗಾಕೃವಿಕೇ, ಬೆಂಗಳೂರು
2. ಸಹ ಸಂಶೋಧನಾ ನಿರ್ದೇಶಕರು, ವಕೃಸಂಕೇ, ಮಂಡ್ಯ
3. ಎಲ್ಲಾ ಹಿರಿಯ ಕ್ಷೇತ್ರ ಅಧೀಕ್ಷಕರುಗಳು / ಕ್ಷೇತ್ರ ಅಧೀಕ್ಷಕರುಗಳು

ಮುಖ್ಯಸ್ಥರು, ಎಕೆಎಂಯೂ, ಕೃವಿವಿ, ಜಿಕೆವಿಕೆ, ಬೆಂಗಳೂರು ಮಾಹಿತಿಗಾಗಿ ಮತ್ತು ಕೃವಿವಿದ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.